ಶ್ರೀ ಎ. ಮುನಿಯಪ್ಪ.—ಹಾಗಿದ್ದರೆ ಬಡವರ ಕಷ್ಟ ಸುಖಗಳನ್ನು ತಮಗೆ ತಿಳಿಸುವುದಕ್ಕಾಗಿ ಒಂದು ಸಬ್ ಕಮಿಟಿಯನ್ನೇರ್ಪಡಿಸಿ ಈ ವಿಷಯವನ್ನು ಪುನರ್ವಿಮರ್ಶೆ ಮಾಡುತ್ತೀರಾ?

ಶ್ರೀ ಕೆ. ಹನುಮಂತಯ್ಯ.—ಯೋಚನೆಮಾಡೋಣ.

ಶ್ರೀ ಎ. ವಿ. ನರಸಿಂಹರೆಡ್ಡಿ.—ತಾವು ಬೆಂಗಳೂರು ಜಿಲ್ಲೆಯಲ್ಲಿ 319 ಲೈಟ್‌ಗಳು disconnect ಆಗಿವೆ ಯೆಂದು ಹೇಳಿದ್ದೀರಿ. ಈ ಲೈಟ್‌ಗಳೆಲ್ಲಾ ಬಹುಮಟ್ಟಿಗೆ flat rate ಹಿಂದೆ ವಿಧಿಸಿದ್ದಂಥ connections ಅಲ್ಲವೇ? ಬಹಳ ಹಿಂದಿನಿಂದ ಫ್ಲಾಟ್ ರೇಟುಗಳಿದ್ದು ಈಗ ದರ ಹೆಚ್ಚುಮಾಡಿದ್ದರಿಂದ ಹಣ ಕಟ್ಟುವುದಕ್ಕಾಗದೆ ಹೋಗಿದ್ದರಿಂದ ಈರೀತಿ disconnect ಆಗಿವೆಯಲ್ಲವೇ?

ಶ್ರೀ ಕೆ. ಹನುಮಂತಯ್ಯ.—ಉತ್ತರದಲ್ಲಿ ಕೊಟ್ಟಿದೆ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಫ್ಲಾಟ್ ರೇಟನ್ನು ತಪ್ಪಿಸಿ ರೂ. 1-11-0 ಗೆ ಹೆಚ್ಚಿಸಿದ್ದು ಯಾವ ಲೆಕ್ಕಾಚಾರದಮೇಲೆ?

Mr. SPEAKER.—This was answered on Friday to Question No. 273 put by Sri Byre Gowda.

Absorption of Labourers in the Electrical Department.

Q.—312. Sri V. R. NAIDU (Malleswaram).—

Will the Government be pleased to state :—

(*a*) the number of labourers that are working in the Mysore Electrical Department;

(*b*) the number that are working as per muster rolls ;

(*c*) whether they will take steps to absorb those on the muster rolls permanently ?

A.—Sri K. HANUMANTHAIYA (Chief Minister).—

(*a*) About 7,878.

(*b*) About 4,000 (this number is included in the above figure).

(*c*) Persons of proved efficiency who fulfil prescribed conditions of age and skill are being absorbed against permanent vacancies as and when they arise.

ಶ್ರೀ ವಿ. ಆರ್. ನಾಯ್ಡು.—(a) ಪ್ರಶ್ನೆಗೆ ಉತ್ತರದಲ್ಲಿ ಸುಮಾರು 7,878 ಮಂದಿ ಕೆಲಸಗಾರರಿದ್ದಾರೆಂದು ಹೇಳಿದ್ದೀರಿ. ಈ ಸಂಖ್ಯೆಯಲ್ಲಿ ಅಧಿಕಾರಿಗಳೂ ಸೇರಿದ್ದಾರೆಯೇ?

ಶ್ರೀ ಕೆ. ಹನುಮಂತಯ್ಯ.—ಎಲ್ಲರೂ ಸೇರಿದ್ದಾರೆ.

ಶ್ರೀ ವಿ. ಆರ್. ನಾಯ್ಡು.—ಎಲೆಕ್ಟ್ರಿಕ್ ಇಲಾಖೆ ಮೈಸೂರು ಸಂಸ್ಥಾನದಲ್ಲಿ ಸ್ಥಾಪನೆಯಾಗಿ ವಿದ್ಯುತ್ತನ್ನು ಒದಗಿಸಲು ಪ್ರಾರಂಭವಾದಿದ್ದು ಯಾವಾಗ?

(No answer.)

ಶ್ರೀ ವಿ. ಆರ್. ನಾಯ್ಡು.—ಮಸ್ಟರ್ ರೋಲ್ ಪಟ್ಟಿಯಲ್ಲಿ ಸುಮಾರು 4,000 ಮಂದಿ ಕೆಲಸಗಾರರು ಇದ್ದಾರೆಂದು ಹೇಳಿದ್ದೀರಿ. ಅವರುಗಳು ಕೆಲಸಕ್ಕೆ ಸೇರಿ ಎಷ್ಟು ವರ್ಷವಾಯಿತು?

ಶ್ರೀ ಕೆ. ಹನುಮಂತಯ್ಯ.—ಮಾನ್ಯ ಸದಸ್ಯರ ಮನಸ್ಸಿನಲ್ಲಿರುವುದಕ್ಕೆ ಉತ್ತರವನ್ನು (ಸಿ) ನಲ್ಲಿ ಹೇಳಿದೆ. 'Persons of proved efficiency who fulfil prescribed conditions of age and skill are being absorbed against permanent vacancies as and when they arise' ಎಂದು ಹೇಳಿದ್ದೇವೆ. ಆ ರೀತಿಯಾಗಿ ಖಾಯಂ ಕೆಲಸ ಕೊಡುವುದಕ್ಕೆ ಪ್ರಯತ್ನಮಾಡುತ್ತೇವೆ.

ಶ್ರೀ ಪಿ. ಆರ್. ನಾಯ್ಡು.—ಇವರೆಲ್ಲರಿಗೂ ದಿನ ಕೂಲಿ ಸಂಬಳ ಕೊಡುತ್ತಿದ್ದೀರಾ?

ಶ್ರೀ ಕೆ. ಹನುಮಂತಯ್ಯ.—ಕೆಲವರಿಗೆ ದಿನಕೂಲಿ, ಕೆಲವರಿಗೆ ಸಂಬಳ ಅನ್ವಯಿಸುತ್ತಿದೆ.

ಶ್ರೀ ವಿ. ಆರ್. ನಾಯ್ಡು.—ದಿನಕೂಲಿಯೆಂದರೆ ಸರ್ವೇಸಾಧಾರಣವಾಗಿ ಒಂದು ದಿವಸಕ್ಕೆ ಒಬ್ಬ ಕೂಲಿಗೆ ಎಷ್ಟು ಕೂಲಿ ಕೊಡುತ್ತೀರಿ?

ಶ್ರೀ ಕೆ. ಹನುಮಂತಯ್ಯ.—ಇಷ್ಟು ಉತ್ತರ ಹೇಳುತ್ತೇನೆ: ಮಾನ್ಯ ಸದಸ್ಯರು ಅಲ್ಲ ಬರತಕ್ಕ ಆದಾಯ ಎಷ್ಟು, ಕೂಲಿಯವರಿಗೆ ಎಷ್ಟು ಕೊಡಬಹುದು ಎಂಬುದನ್ನೂ ಪರಿಶೀಲನೆಮಾಡಬೇಕು.

ಶ್ರೀ ವಿ. ಆರ್. ನಾಯ್ಡು.—ಸುಮಾರು 6-7 ವರ್ಷಗಳಿಂದಲೂ ಕೆಲಸಮಾಡುತ್ತಿದ್ದರೂ confirm ಆಗದೆ ಈ ಕೂಲಿಗಳು ಕೆಲಸಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಕೆ. ಹನುಮಂತಯ್ಯ.—ಉತ್ತರದಲ್ಲಿ ಹೇಳಿದೆ.

ಶ್ರೀ ವಿ. ಆರ್. ನಾಯ್ಡು.—15 ವರ್ಷಗಳಾದರೂ confirm ಮಾಡದೆ ಇದ್ದರೆ ಅವರ ಗತಿಯೇನು?

(No answer.)

Amounts provided for construction and repairs of University Buildings.

Q.—75. Sri G. SIVAPPA (Holalkere).—

Will the Government be pleased to state :—

(*a*) the amount provided for the construction and repairs each year of the University Buildings in the University budget since 1949-50 to 1952-53;

(*b*) the amount spent under this head each year since 1949-50 to 1952-53 ?

A.—Sri A. G. RAMACHANDRA RAO (Minister for Law and Education).—

		Rs.	a.	p.
(*a*)	1949-50	5,50,000	0	0
	1950-51	4,00,000	0	0
	1951-52	4,00,000	0	0
	1952-53	4,50,000	0	0
(*b*)	1949-50	3,89,066	0	0
	1950-51	4,73,888	0	0
	1951-52	3,18,098	0	0
	1952-53	3,83,497	10	0